# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆ.ಬಿ. ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಬಡಾವಣೆ, ಬೆಂಗಳೂರು - 560096

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ ಇದರ**

**ಆಡಳಿತಮಂಡಳಿಯ ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆ**

ದಿನಾಂಕ : 28-01-2025 ಮಂಗಳವಾರ ಬೆಳಗ್ಗೆ 9-00 ರಿಂದ
ಸಂಜೆ 4-00 ಗಂಟೆಯವರೆಗೆ

ಸ್ಥಳ:- ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ,
ಜೆ.ಬಿ. ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಬಡಾವಣೆ,
ಬೆಂಗಳೂರು - 560096

Scan for Location

**ಚುನಾವಣಾ ತಿಳುವಳಿಕೆ ಪತ್ರ (ನೋಟೀಸ್) ವೇಳಾಪಟ್ಟಿ,**

**ಸೂಚನೆಗಳು ಮತ್ತು ಇದಕ್ಕೆ ಸಂಬಂಧಿಸಿದ ಇತರೆ ವಿಷಯಗಳು**

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆ.ಬಿ. ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಬಡಾವಣೆ, ಬೆಂಗಳೂರು - 560096

**ಇದರ ರಿಟರ್ನಿಂಗ್ ಆಫೀಸರ್ ಇವರ ಚುನಾವಣೆ ನಡವಳಿಕೆಗಳು.**

**-: ಪ್ರಕಟಣೆ :-**

ಸಂಖ್ಯೆ: ಚುನಾವಣೆ/ವಿವ/46/2023-24 ದಿನಾಂಕ : 11-01-2025

**ವಿಷಯ :- ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ನಂದಿನಿ ಬಡಾವಣೆ, ಬೆಂಗಳೂರು ಇದರ ಆಡಳಿತಮಂಡಳಿಗೆ 5 ವರ್ಷಗಳ ಅವಧಿಗೆ ಚುನಾವಣೆ ನಡೆಸುತ್ತಿರುವ ಬಗ್ಗೆ.**

**ಉಲ್ಲೇಖ :- 1) ಕರ್ನಾಟಕ ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರ ಆದೇಶ ಸಂಖ್ಯೆ ಸಂಖ್ಯೆ : ಸಚುಪ್ರಾ/ಬೆಂ.ಪ್ರಾ/ಅಪೆಕ್ಸ್/109/2023-24 ದಿನಾಂಕ 12-12-2024**

**2) ಮಾನ್ಯ ಪ್ರಾದೇಶಿಕ ಆಯುಕ್ತರು ಹಾಗೂ ಚುನಾವಣಾಧಿಕಾರಿಗಳು ಬೆಂಗಳೂರು ವಿಭಾಗ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ ಚುನಾವಣೆ/ವಿವ/46/2023-24 ದಿನಾಂಕ : 07-12-2024**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ನಂದಿನಿ ಬಡಾವಣೆ, ಬೆಂಗಳೂರು ಇದರ ಆಡಳಿತಮಂಡಳಿಗೆ 5 ವರ್ಷಗಳ ಅವದಿಗೆ ಚುನಾವಣೆ ನಡೆಸಲು ಕರ್ನಾಟಕ ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತರು ಮತ್ತು ಪ್ರಾದೇಶಿಕ ಆಯುಕ್ತರು ಹಾಗೂ ಚುನಾವಣಾಧಿಕಾರಿಗಳು ಉಲ್ಲೇಖದ ಪತ್ರಗಳಲ್ಲಿ ತಿಳಿಸಿರುವಂತೆ, ಅಧಿಸೂಚನೆ ಹೊರಡಿಸಿರುತ್ತಾರೆ.

ಅದರಂತೆ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ನಂದಿನಿ ಬಡಾವಣೆ, ಬೆಂಗಳೂರು ಇದರ ಆಡಳಿತಮಂಡಳಿಯ ಚುನಾವಣೆಯ ಪ್ರಕ್ರಿಯೆಯು ದಿನಾಂಕ 13-01-2025 ರಿಂದ ಪ್ರಾರಂಭಗೊಂಡು ದಿನಾಂಕ 28-01-2025ಕ್ಕೆ ಪೂರ್ಣಗೊಳ್ಳುತ್ತದೆ. ಉಲ್ಲೇಖ (1) ರಂತೆ, ಆಯುಕ್ತರು, ಕರ್ನಾಟಕ ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಇದರ ಆಡಳಿತಮಂಡಳಿಯ ಮುಂದಿನ ಅವಧಿಗೆ ಅಂದರೆ ಚುನಾವಣಾ ದಿನಾಂಕದಿಂದ, ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಮತ್ತು ಚುನಾವಣೆ ನಂತರ ಸದರಿ ಮಹಾಮಂಡಳದ ಪದಾಧಿಕಾರಿಗಳ ಚುನಾವಣೆ ನಡೆಸಲು ವಿಶೇಷ ಭೂ-ಸ್ವಾಧೀನಾಧಿಕಾರಿ-3, ಬೆಂಗಳೂರುರವರನ್ನು ರಿಟರ್ನಿಂಗ್ ಆಫೀಸರ್‌ರನ್ನಾಗಿ ನೇಮಕ ಮಾಡಿ ಆದೇಶಿಸಿರುತ್ತಾರೆ.

ಉಲ್ಲೇಖ (1) ರ ಆದೇಶದ ಪ್ರಕಾರ ನನಗೆ ಪ್ರದತ್ತವಾದ ಅಧಿಕಾರದ ಅನ್ವಯ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ಆಡಳಿತಮಂಡಳಿಯ ಮುಂದಿನ ಅವಧಿಗೆ ಅಂದರೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಮತ್ತು ಚುನಾವಣೆ ನಂತರ ಪದಾಧಿಕಾರಿಗಳ ಚುನಾವಣೆ ನಡೆಸಲು ನನ್ನ ಸ್ವಹಸ್ತ ಮತ್ತು ಮೊಹರಿನೊಂದಿಗೆ ಈ ಚುನಾವಣೆ ಪ್ರಕಟಣೆಯನ್ನು ಹೊರಡಿಸಿರುತ್ತೇನೆ.

ಸಹಿ/-
**(ಡಾ|| ಬಿ.ಆರ್. ಹರೀಶ್, ಕೆ.ಎ.ಎಸ್.)**
ವಿಶೇಷ ಭೂಸ್ವಾಧೀನಾಧಿಕಾರಿ-3
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಿಟರ್ನಿಂಗ್ ಆಫೀಸರ್,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ನಂದಿನಿ ಬಡಾವಣೆ, ಬೆಂಗಳೂರು

**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಪ್ರಾಧಿಕಾರ**

**ಡಾ॥ ಬಿ.ಆರ್. ಹರೀಶ್, ಕೆ.ಎ.ಎಸ್., ವಿಶೇಷ ಭೂಸ್ವಾಧೀನಾಧಿಕಾರಿ-3, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಿಟರ್ನಿಂಗ್ ಆಫೀಸರ್, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆ.ಬಿ. ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಬಡಾವಣೆ, ಬೆಂಗಳೂರು - 560096, ಇವರ ಕಛೇರಿಯಿಂದ**

ನಂ. ಚುನಾವಣೆ/ವಿವ/46/2023-24 ದಿನಾಂಕ : 11-01-2025

ನಮೂನೆ-XII
{ನಿಯಮ 14(3)ಅನ್ನು ನೋಡಿ}

**ಚುನಾವಣಾ ನೋಟೀಸು**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಈ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ (ನಿರ್ದೇಶಕರುಗಳು) ಚುನಾವಣೆಯನ್ನು ದಿನಾಂಕ 28-01-2025ರ ಮಂಗಳವಾರ ಬೆಳಗ್ಗೆ 9.00 ರಿಂದ ಸಂಜೆ 4.00 ಘಂಟೆಯವರೆಗೆ ಸ್ಥಳ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ, ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆ.ಬಿ. ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಬಡಾವಣೆ, ಬೆಂಗಳೂರು - 560096.

ಇಲ್ಲಿ ಸದರಿ ಮಹಾಮಂಡಳ ಮುಂದೆ ತಿಳಿಸಿರುವ ಚುನಾವಣಾ ಗ್ರೂಪ್ ಕ್ಷೇತ್ರಗಳಿಂದ ನಿರ್ದಿಷ್ಟ ಪಡಿಸಿರುವ ಸಂಖ್ಯೆಯಲ್ಲಿ ಒಟ್ಟು 21 (ಇಪ್ಪತ್ತೊಂದು) ನಿರ್ದೇಶಕರುಗಳನ್ನು ಚುನಾವಣೆ ಮೂಲಕ ಆಯ್ಕೆ ಮಾಡುವ ಸಲುವಾಗಿ ಸದರಿ ಮಹಾಮಂಡಳದ ಅರ್ಹ ಸದಸ್ಯ ಸಹಕಾರ ಸಂಘಗಳಿಗೆ ಈ ಮೂಲಕ ನೋಟೀಸು ನೀಡಲಾಗಿದೆ.

ಸದರಿ ಮಹಾಮಂಡಳದ ಚುನಾವಣೆಗೆ ವೇಳಾಪಟ್ಟಿಯು ಈ ಕೆಳಕಂಡಂತೆ ಇರತಕ್ಕದ್ದೆಂದು ನೋಟೀಸು ನೀಡಲಾಗಿದೆ.

| | | |
|---|---|---|
| (ಎ) | ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ (ನಿಯಮ 14ಎ) | ಸಹಕಾರ ಚುನಾವಣಾ ಪ್ರಾಧಿಕಾರದ ನಮೂನೆ-XIII ರಂತೆ ದಿನಾಂಕ 20.01.2025 ಸೋಮವಾರ, ಸದರಿ ಮಹಾಮಂಡಳದ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಪೂರ್ವಾಹ್ನ 11.00 ರಿಂದ ಅಪರಾಹ್ನ 3.00 ಘಂಟೆಯ ಒಳಗೆ. |
| (ಬಿ) | ರಿಟರ್ನಿಂಗ್ ಆಫೀಸರ್ ರಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14 ಬಿ) | ದಿನಾಂಕ: 21.01.2025ರ ಮಂಗಳವಾರ ಸದರಿ ಮಹಾಮಂಡಳದ ಕಛೇರಿಯಲ್ಲಿ ಪೂರ್ವಾಹ್ನ 11.30 ಘಂಟೆಗೆ. |
| (ಸಿ) | ರಿಟರ್ನಿಂಗ್ ಆಫೀಸರ್ ರಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14ಬಿ(4)) | ದಿನಾಂಕ: 21.01.2025ರ ಮಂಗಳವಾರ ಸದರಿ ಮಹಾಮಂಡಳದ ನಾಮಪತ್ರಗಳ ಪರಿಶೀಲನೆ ಮುಗಿದ ನಂತರ, ಸಹಕಾರ ಚುನಾವಣಾ ಪ್ರಾಧಿಕಾರದ ನಮೂನೆ-XIV |
| (ಡಿ) | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮ-ಪತ್ರಗಳ ಹಿಂತೆಗೆದುಕೊಳ್ಳಲು ಕೊನೆಯ ದಿನ (ನಿಯಮ 14ಸಿ) | ಸಹಕಾರ ಚುನಾವಣಾ ಪ್ರಾಧಿಕಾರದ ನಮೂನೆ XV ರಂತೆ ದಿನಾಂಕ: 22-01-2025ರ ಬುಧವಾರ ಅಪರಾಹ್ನ 3.00 ಘಂಟೆಯ ಒಳಗೆ. |

| | | |
|---|---|---|
| (ಇ) | ರಿಟರ್ನಿಂಗ್ ಆಫೀಸರ್ ರಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14 ಡಿ) | ದಿನಾಂಕ 22-01-2025 ರಂದು ಬುಧವಾರ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಸಮಯ ಮುಗಿದ ನಂತರ, ನಮೂನೆ-XVI |
| (ಎಫ್) | ರಿಟರ್ನಿಂಗ್ ಆಫೀಸರ್ ರಿಂದ ಅಭ್ಯರ್ಥಿಗಳು ಅಪೇಕ್ಷಿಸಿದಲ್ಲಿ ಚಿಹ್ನೆಗಳ ಹಂಚಿಕೆ (ನಿಯಮ 14ಇ) | ದಿನಾಂಕ 22-01-2025 ರ ಬುಧವಾರ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಅಂತಿಮ ಪಟ್ಟಿಯ ಪ್ರಕಟಣೆ ನಂತರ |
| (ಜಿ) | ಸಿಂಧುತ್ವ ಹೊಂದಿರುವ ಅಭ್ಯರ್ಥಿಗಳ ಪಟ್ಟಿಯ ಚಿಹ್ನೆಯೊಂದಿಗೆ ಪ್ರಕಟಣೆ | ದಿನಾಂಕ 24-01-2025 ರ ಶುಕ್ರವಾರದಂದು |
| (ಹೆಚ್) | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ 28-01-2025 ರಂದು ಮಂಗಳವಾರ ಬೆಳಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯವರೆಗೆ ಸ್ಥಳ: ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ, ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆ.ಬಿ. ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಬಡಾವಣೆ, ಬೆಂಗಳೂರು - 560096. |
| (ಐ) | ಮತ ಎಣಿಕೆಯ ದಿನ ಮತ್ತು ದಿನಾಂಕ | ದಿನಾಂಕ 28-01-2025 ರಂದು ಮಂಗಳವಾರ ಚುನಾವಣೆಯ ಮತದಾನ ಮುಗಿದ ನಂತರ ಸ್ಥಳ: ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ, ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆ.ಬಿ. ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಬಡಾವಣೆ, ಬೆಂಗಳೂರು - 560096. |
| (ಜೆ) | ರಿಟರ್ನಿಂಗ್ ಆಫೀಸರ್ ರಿಂದ ಫಲಿತಾಂಶ ಘೋಷಣೆ | ದಿನಾಂಕ 28-01-2025 ರಂದು ಮಂಗಳವಾರ ಸದರಿ ಚುನಾವಣೆಯ ಮತ ಎಣಿಕೆ ಕಾರ್ಯ ಮುಗಿದ ನಂತರ. |

ಸಹಿ/-

**(ಡಾ|| ಬಿ.ಆರ್. ಹರೀಶ್, ಕೆ.ಎ.ಎಸ್)**

ವಿಶೇಷ ಭೂಸ್ವಾಧೀನಾಧಿಕಾರಿ-3

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಿಟರ್ನಿಂಗ್ ಆಫೀಸರ್,

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ

ನಂದಿನಿ ಬಡಾವಣೆ, ಬೆಂಗಳೂರು

**ಸದರಿ ಚುನಾವಣೆಗೆ ಸಂಬಂಧಿಸಿದಂತೆ ಕೆಳಕಂಡ ಮಾಹಿತಿ ಮತ್ತು ಸೂಚನೆಗಳನ್ನು ಸದಸ್ಯ ಸಹಕಾರ ಸಂಘಗಳು ಮತ್ತು ಅದರ ಡಿಲಿಗೇಟರ್ / ಪ್ರತಿನಿಧಿಗಳಿಗೆ ನೀಡಲಾಗಿದೆ.**

ಸದರಿ ಮಹಾಮಂಡಳದ ಬೈಲಾ ನಂ. 25 ರಂತೆ ನಿರ್ದೇಶಕರ ಮಂಡಲಿಗೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆಯ ಮೂಲಕ ಆಯ್ಕೆಯಾಗ ಬೇಕಾಗಿರುವ ನಿರ್ದೇಶಕರುಗಳ ಸ್ಥಾನಗಳ ವಿವರ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಗ್ರೂಪ್‌ಗಳ ವಿವರ | ಗ್ರೂಪ್‌ನಲ್ಲಿರುವ ಜಿಲ್ಲೆಗಳ ವಿವರ | ಚುನಾವಣೆಯಲ್ಲಿ ಆಯ್ಕೆಯಾಗಬೇಕಾಗಿರುವ ನಿರ್ದೇಶಕರುಗಳ ಸಂಖ್ಯೆ |
|---|---|---|---|
| 1 | 2 | 3 | 4 |
| ಅ | ಗ್ರೂಪ್-1 | 1. ಬೆಂಗಳೂರು ನಗರ ಜಿಲ್ಲೆ | 06 ಜನ ನಿರ್ದೇಶಕರು |
| | | 2. ಬೆಂಗಳೂರು ಗ್ರಾಮಾಂತರ ಜಿಲ್ಲೆ | |
| | | 3. ರಾಮನಗರ ಜಿಲ್ಲೆ | |
| ಆ | ಗ್ರೂಪ್-2 | 1. ಕೋಲಾರ ಜಿಲ್ಲೆ | 04 ಜನ ನಿರ್ದೇಶಕರು |
| | | 2. ತುಮಕೂರು ಜಿಲ್ಲೆ | |
| | | 3. ಚಿಕ್ಕಬಳ್ಳಾಪುರ ಜಿಲ್ಲೆ | |
| | | 4. ಚಿತ್ರದುರ್ಗ ಜಿಲ್ಲೆ | |
| | | 5. ಶಿವಮೊಗ್ಗ ಜಿಲ್ಲೆ | |
| | | 6. ದಾವಣಗೆರೆ ಜಿಲ್ಲೆ | |
| ಇ | ಗ್ರೂಪ್-3 | 1. ಬೆಳಗಾಂ ಜಿಲ್ಲೆ | 03 ಜನ ನಿರ್ದೇಶಕರು |
| | | 2. ಧಾರವಾಡ ಜಿಲ್ಲೆ | |
| | | 3. ಹಾವೇರಿ ಜಿಲ್ಲೆ | |
| | | 4. ಗದಗ ಜಿಲ್ಲೆ | |
| | | 5. ಉತ್ತರಕನ್ನಡ ಜಿಲ್ಲೆ | |
| ಈ | ಗ್ರೂಪ್-4 | 1. ಬಿಜಾಪುರ ಜಿಲ್ಲೆ | 05 ಜನ ನಿರ್ದೇಶಕರು |
| | | 2. ಬಾಗಲಕೋಟೆ ಜಿಲ್ಲೆ | |
| | | 3. ಗುಲ್ಬರ್ಗ ಜಿಲ್ಲೆ | |
| | | 4. ಕೊಪ್ಪಳ ಜಿಲ್ಲೆ | |
| | | 5. ಬೀದರ್ ಜಿಲ್ಲೆ | |
| | | 6. ರಾಯಚೂರು ಜಿಲ್ಲೆ | |
| | | 7. ಬಳ್ಳಾರಿ ಜಿಲ್ಲೆ | |
| | | 8. ಯಾದಗಿರಿ ಜಿಲ್ಲೆ | |
| ಉ | ಗ್ರೂಪ್-5 | 1. ಮೈಸೂರು ಜಿಲ್ಲೆ | 03 ಜನ ನಿರ್ದೇಶಕರು |
| | | 2. ಚಾಮರಾಜನಗರ ಜಿಲ್ಲೆ | |
| | | 3. ದಕ್ಷಿಣಕನ್ನಡ ಜಿಲ್ಲೆ | |
| | | 4. ಉಡುಪಿ ಜಿಲ್ಲೆ | |
| | | 5. ಕೊಡಗು ಜಿಲ್ಲೆ | |

| | | | |
|---|---|---|---|
| | | 6. ಹಾಸನ ಜಿಲ್ಲೆ | |
| | | 7. ಮಂಡ್ಯ ಜಿಲ್ಲೆ | |
| | | 8. ಚಿಕ್ಕಮಗಳೂರು ಜಿಲ್ಲೆ | |
| | | **ಒಟ್ಟು** | 21 ಜನ ನಿರ್ದೇಶಕರು |

**ಟಿಪ್ಪಣಿ :–** ಆಯಾ ಗ್ರೂಪ್ / ಕ್ಷೇತ್ರದ ಡಿಲಿಗೇಟ್ (ಪ್ರತಿನಿಧಿಗಳು) ಆಯಾ ಗ್ರೂಪ್ / ಕ್ಷೇತ್ರಗಳಲ್ಲಿನ ಸ್ಪರ್ಧಿಗಳಿಗೆ ಮತ್ತು ನಮೂದಿಸಿದ ಸಂಖ್ಯೆಯಷ್ಟು ಸ್ಪರ್ಧಿಗಳಿಗೆ ಮತ ಚಲಾಯಿಸುವ ಹಕ್ಕು ಉಳ್ಳವರಾಗಿರುತ್ತಾರೆ.

1. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಅವರವರ ಗ್ರೂಪ್ / ಕ್ಷೇತ್ರಕ್ಕೆ ಅನುಗುಣವಾಗಿ ನಾಮಪತ್ರವನ್ನು ನಮೂನೆ–XII ರಲ್ಲಿ ಸದಸ್ಯ ಸಹಕಾರ ಸಂಘಗಳ ಡೆಲಿಗೇಟರ್ (ಪ್ರನಿಧಿಗಳು) ಅವರ ಸಹಿ ಹಾಗೂ ಅವರ ಗುಂಪು ಕ್ಷೇತ್ರಕ್ಕೆ ಸೇರಿರುವ ಮತದಾರ ಸದಸ್ಯ ಸಹಕಾರ ಸಂಘಗಳ ಪ್ರತಿನಿಧಿಗಳ ಸೂಚಕರ ಸಹಿಯೊಂದಿಗೆ ನಿಗದಿತ ವೇಳಾಪಟ್ಟಿಯಲ್ಲಿ ತಿಳಿಸಿರುವಂತೆ ರಿಟರ್ನಿಂಗ್ ಆಫೀಸರ್‌ಗಳಿಗೆ ಸಲ್ಲಿಸತಕ್ಕದ್ದು.

2. ಸದರಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಚುನಾವಣಾ ಠೇವಣಿಯಾಗಿ ರೂ. 5,000/– ಗಳನ್ನು ಮಹಾಮಂಡಳಕ್ಕೆ ನಗದು ರೂಪದಲ್ಲಿ ಪಾವತಿಸಿ ಅದರ ರಸೀದಿಯನ್ನು ನಾಮಪತ್ರದೊಂದಿಗೆ ಲಗತ್ತಿಸಿರತಕ್ಕದ್ದು ಅಥವಾ ಚುನಾವಣಾ ಠೇವಣಿಯನ್ನು ಅಂಗೀಕೃತ ಬ್ಯಾಂಕುಗಳಿಂದ ಡಿ.ಡಿ.ಯನ್ನು M/S. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು / (Karnataka State Co-Op. Credit Societies Federation Ltd., Bangalore) ಈ ಸಂಸ್ಥೆಯ ಹೆಸರಿಗೆ ಪಡೆದುಕೊಂಡು ನಾಮಪತ್ರದೊಂದಿಗೆ ಸಲ್ಲಿಸತಕ್ಕದ್ದು.

3. ಸದರಿ ಚುನಾವಣೆಯಲ್ಲಿ ಸದಸ್ಯ ಸಹಕಾರ ಸಂಘಗಳ ಡೆಲಿಗೇಟರು (ಪ್ರತಿನಿಧಿಗಳು) ಅವರವರ ಗ್ರೂಪ್ ಚುನಾವಣಾ ಕ್ಷೇತ್ರಕ್ಕೆ ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸತಕ್ಕದ್ದು. ಹಾಗೆಯೇ ಸದರಿ ಚುನಾವಣೆಯಲ್ಲಿ ನಾಮಪತ್ರಗಳಿಗೆ ಸೂಚಕರಾಗಿ ಸಹಿ ಮಾಡುವ ಸೂಚಕರು ಕೇವಲ ಒಬ್ಬ ಅಭ್ಯರ್ಥಿಗೆ ಮಾತ್ರ ಸೂಚಕರಾಗಿ ಸಹಿ ಮಾಡತಕ್ಕದ್ದು.

4. ನಾಮಪತ್ರಗಳ ಪರಿಶೀಲನೆ ವೇಳೆಯಲ್ಲಿ ಆಯಾಯ ಗ್ರೂಪ್ ಕ್ಷೇತ್ರದ ಅಭ್ಯರ್ಥಿಗಳು ಅಥವಾ ಸೂಚಕರು ಇವರಲ್ಲಿ ಯಾರಾದರೊಬ್ಬರು ಮಾತ್ರ ಪರಿಶೀಲನಾ ವೇಳೆಯಲ್ಲಿ ರಿಟರ್ನಿಂಗ್ ಆಫೀಸರ್‌ರವರ ಮುಂದೆ ಹಾಜರಿರಬಹುದು.

5. ಸದರಿ ಚುನಾವಣೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960 (ಇತ್ತೀಚಿನ ತಿದ್ದುಪಡಿ ಒಳಗೊಂಡಂತೆ) ಹಾಗೂ ಸದರಿ ಮಹಾಮಂಡಳದ ಬೈಲಾದಲ್ಲಿ ತಿಳಿಸಿರುವ ಎಲ್ಲಾ ತರಹದ ಅರ್ಹತೆಗಳನ್ನು ಸದಸ್ಯ ಸಂಘದ ಡೆಲಿಗೇಟರು (ಪ್ರತಿನಿಧಿಗಳು) ಹೊಂದಿರತಕ್ಕದ್ದು.

6. ಈ ಪ್ರಕಟಣೆಯೊಂದಿಗೆ, ಸದಸ್ಯ ಸಹಕಾರ ಸಂಘದ ಪ್ರತಿನಿಧಿ ಅಭ್ಯರ್ಥಿಗಳಿಗೆ ಅನುಕೂಲವಾಗಲು ಚುನಾವಣೆಗೆ ಸಂಬಂಧಿಸಿದ ನಮೂನೆಗಳನ್ನು ಲಗತ್ತಿಸಿ ಸದಸ್ಯ ಸಹಕಾರ ಸಂಘಗಳಿಗೆ ಕಳುಹಿಸಲಾಗಿದೆ.

7. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಚುನಾವಣೆ ಚಿಹ್ನೆಗಳನ್ನು ಸರ್ಕಾರವು ಈಗಾಗಲೇ ಅಂಗೀಕೃತ ರಾಜಕೀಯ ಪಕ್ಷಗಳಿಗೆ ಈಗಾಗಲೇ ನೀಡಲಾಗಿರುವ ಚುನಾವಣಾ ಚಿಹ್ನೆಗಳನ್ನು ಹೊರತುಪಡಿಸಿ ಇತರೆ ಚುನಾವಣಾ ಚಿಹ್ನೆಗಳನ್ನು ಸಹಕಾರ ಚುನಾವಣಾ ಪ್ರಾಧಿಕಾರವು ಸೂಚಿಸಿರುವಂತೆ ಮುಕ್ತ ಚಿಹ್ನೆಗಳನ್ನು ಅವರ ನಾಮಪತ್ರದಲ್ಲಿ ನಮೂದಿಸತಕ್ಕದ್ದೆಂದು ತಿಳಿಸಲಾಗಿದೆ. ಚುನಾವಣೆ ಚಿಹ್ನೆಗಳ ನೀಡಿಕೆಯ ತೀರ್ಮಾನವು ರಿಟರ್ನಿಂಗ್ ಆಫೀಸರ್‌ರವರ ಅಂತಿಮ ತೀರ್ಮಾನವಾಗಿರುತ್ತದೆ.

ಸ್ಥಳ : ಬೆಂಗಳೂರು
ದಿನಾಂಕ 11-01-2025

ಸಹಿ/-
**(ಡಾ|| ಬಿ.ಆರ್. ಹರೀಶ್, ಕೆ.ಎ.ಎಸ್.)**
ವಿಶೇಷ ಭೂಸ್ವಾಧೀನಾಧಿಕಾರಿ-3
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಿಟರ್ನಿಂಗ್ ಆಫೀಸರ್,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ನಂದಿನಿ ಬಡಾವಣೆ, ಬೆಂಗಳೂರು

## ಸೂಚನೆಗಳು

1. ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವ ಅಭ್ಯರ್ಥಿ ಡೆಲಿಗೇಟರ್ (ಪ್ರತಿನಿಧಿ) ನಾಮಪತ್ರಗಳ ನಮೂನೆ, ನಮೂನೆ–XIII ರಿಟರ್ನಿಂಗ್ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇವರಿಂದ ಮಹಾಮಂಡಳದ ರಿಟರ್ನಿಂಗ್ ಅಧಿಕಾರಿಗಳ ಕಛೇರಿಯಲ್ಲಿ ಪಡೆದುಕೊಳ್ಳುವುದು ಮತ್ತು ನಿಗದಿತ ಅವಧಿಯೊಳಗೆ ಸಲ್ಲಿಸುವುದು.

2. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ತಮ್ಮ ನಾಮಪತ್ರದಲ್ಲಿ ತಾವು ಯಾವ ಗ್ರೂಪ್ ನಿಂದ ಚುನಾವಣೆಯಲ್ಲಿ ಸ್ಪರ್ಧಿಸ ಬಯಸುತ್ತಾರೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.

3. ಅಭ್ಯರ್ಥಿಗಳು ಸೂಚಕರ ಸಹಿ ಇಲ್ಲದೆ ಸಲ್ಲಿಸುವ, ನಿಗದಿತ ಅವಧಿ ಮುಗಿದ ನಂತರ ಸಲ್ಲಿಸುವ ಮತ್ತು ಕ್ರಮಬದ್ಧವಲ್ಲದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

4. ನಾಮಪತ್ರವನ್ನು ವಾಪಸ್ಸು ಪಡೆಯುವವರು ತಮ್ಮ ಅರ್ಜಿಯನ್ನು ರಿಟರ್ನಿಂಗ್ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇವರ ಕಛೇರಿಯಲ್ಲಿ ಸ್ವತಃ ಸಲ್ಲಿಸಬೇಕು.

5. ಆಡಳಿತಮಂಡಳಿ ನಿರ್ದೇಶಕರಾಗಿ ಚುನಾಯಿತರಾಗಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960 ಹಾಗೂ ಮಹಾಮಂಡಳದ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.

6. ಆಡಳಿತಮಂಡಳಿ ನಿರ್ದೇಶಕರಾಗಿ ಚುನಾಯಿತರಾಗಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960 ಹಾಗೂ ಮಹಾಮಂಡಳದ ಉಪನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ರೀತ್ಯಾ ಅನರ್ಹತೆಗೆ ಒಳಪಟ್ಟಿರತಕ್ಕದ್ದಲ್ಲ ಅಥವಾ ಹೊಂದಿರತಕ್ಕದ್ದಲ್ಲ.

7. ಮಹಾಮಂಡಳದ ಉಪನಿಯಮಗಳ ಸಂಖ್ಯೆ 28 ರಂತೆ ಆಡಳಿತ ಮಂಡಳಿ ಸದಸ್ಯ (ನಿರ್ದೇಶಕರು) ರಾಗಲು ಅನರ್ಹತೆಗಳನ್ನು ಹೊಂದಿದ್ದಲ್ಲಿ ಆ ವ್ಯಕ್ತಿಯು ನಿರ್ದೇಶಕರಾಗಿ ಚುನಾಯಿತರಾಗಲು ಅನರ್ಹರಾಗಿರುತ್ತಾರೆ.

8. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಯಮ 14 ಎ.ಇ. ಪ್ರಕಾರ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಯು ಪಡೆಯಬೇಕಾದ (ಒಟ್ಟಾರೆ ಮಾನ್ಯವಾದ ಮತಗಳ ಆರನೇ ಒಂದು ಭಾಗ) ಮತಗಳನ್ನು ಪಡೆಯದಿದ್ದಲ್ಲಿ ಆತನ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

9. ಮತದಾನಕ್ಕೆ ಹಾಜರಾಗುವ ಮತದಾರರು ಅವರು ಪ್ರತಿನಿಧಿಸುವ ಸಹಕಾರ ಸಂಘದಿಂದ ನೀಡಿರುವ (ಚುನಾವಣಾ ಪ್ರಾಧಿಕಾರ ನಿಗದಿಪಡಿಸಿರುವ ನಮೂನೆಯಲ್ಲಿ) ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.

10. ಚುನಾವಣಾ ದಿನದಂದು ಸಹಕಾರ ಚುನಾವಣಾ ಪ್ರಾಧಿಕಾರವು ನಿಗಧಿಪಡಿಸಿರುವ ನಮೂನೆಯಲ್ಲಿನ ಸಂಘದ ಪ್ರತಿ ಮತ್ತು ಡೆಲಿಗೇಟರ್ (ಪ್ರತಿನಿಧಿಯ) ಗುರುತಿನ ಚೀಟಿಯನ್ನು ಚುನಾವಣಾ ದಿನದಂದು ಕಡ್ಡಾಯವಾಗಿ ಹಾಜರುಪಡಿಸಬೇಕು.

11. ಸೂಚಕರು ಅವರು ಪ್ರತಿನಿಧಿಸುವ ಸಹಕಾರ ಸಂಘದಿಂದ ಚುನಾವಣಾ ಪ್ರಾಧಿಕಾರ ನಿಗದಿಪಡಿಸಿರುವ ನಮೂನೆಯಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

ಸ್ಥಳ : ಬೆಂಗಳೂರು
ದಿನಾಂಕ 11-01-2025

ಸಹಿ/-
**(ಡಾ|| ಬಿ.ಆರ್. ಹರೀಶ್, ಕೆ.ಎ.ಎಸ್.)**
ವಿಶೇಷ ಭೂಸ್ವಾಧೀನಾಧಿಕಾರಿ-3
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಿಟರ್ನಿಂಗ್ ಆಫೀಸರ್,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ನಂದಿನಿ ಬಡಾವಣೆ, ಬೆಂಗಳೂರು

ಅಭ್ಯರ್ಥಿಯ
ಇತ್ತೀಚಿನ
ಭಾವಚಿತ್ರ

**ನಮೂನೆ-XIII**

**(ನಿಯಮ 14ಎ(1))**

**<u>ನಾಮಪತ್ರ</u>**

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಈ ಸಂಸ್ಥೆಯ ಆಡಳಿತಮಂಡಳಿಯ ನಿರ್ದೇಶಕರ ಚುನಾವಣೆಯು ದಿನಾಂಕ 28-01-2025ರ ಮಂಗಳವಾರದಂದು ನಡೆಯುವ ಚುನಾವಣೆಗೆ ಗ್ರೂಪ್ / ಕ್ಷೇತ್ರ .................... ದಿಂದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು, ಈ ಸಂಸ್ಥೆಯ ಆಡಳಿತಮಂಡಳಿಯ ನಿರ್ದೇಶಕರ ಚುನಾವಣೆಗೆ ಅಭ್ಯರ್ಥಿಯಾಗಿ ಶ್ರೀ/ಶ್ರೀಮತಿ ............................................................................ ರವರನ್ನು ನಾನು ನಾಮಕರಣ ಮಾಡುತ್ತೇನೆ.

ಅಭ್ಯರ್ಥಿಯ ಹೆಸರು : ....................................................................................................

ಸದಸ್ಯರ ಸಹಕಾರ ಸಂಘದ ಡೆಲಿಗೇಟ್ ವಿವರ : ...............................................................................

ಅಭ್ಯರ್ಥಿಯ ತಂದೆ / ಗಂಡನ ಹೆಸರು : ..........................................................................................

ಅಂಚೆ ವಿಳಾಸ : ..............................................................................................................

..............................................................................................................................

..............................................................................................................................

ಅಭ್ಯರ್ಥಿ ಡೆಲಿಗೇಟ್ ಆಗಿರುವ ಸಹಕಾರ ಸಂಘದ ಹೆಸರು : ...............................................................

..............................................................................................................................

ಈ ಚುನಾವಣಾ ಅಭ್ಯರ್ಥಿಯ ಹೆಸರು ಗ್ರೂಪ್ / ಕ್ಷೇತ್ರ .................... ಜಿಲ್ಲೆ .............................. ಸದಸ್ಯ ಸಂಘಗಳ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ .................... ಕ್ರಮ ಸಂಖ್ಯೆಯಲ್ಲಿ ನಮೂದಿಸಲಾಗಿದೆ.

ನನ್ನ ಹೆಸರು ................................................................ ಮತ್ತು ನನ್ನ ಗ್ರೂಪ್ ................ ಜಿಲ್ಲೆ .................................... ಸದಸ್ಯ ಸಂಘಗಳ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ .................... ಕ್ರಮ ಸಂಖ್ಯೆಯಲ್ಲಿ ನಮೂದಿಸಲಾಗಿದೆ.

ಸ್ಥಳ :

ದಿನಾಂಕ : ಸೂಚಕರ ಸಹಿ

--------------------------------------------------------------------------------

## ಅಭ್ಯರ್ಥಿಯಿಂದ ಘೋಷಣೆ

**ಮೇಲೆ ಹೇಳಿದ ಅಭ್ಯರ್ಥಿಯಾದ ನಾನು ಈ ನಾಮ ನಿರ್ದೇಶನಕ್ಕೆ ಒಪ್ಪಿದ್ದೇನೆ, ಹಾಗೂ**

(ಎ) ನನಗೆ ....................... ವರ್ಷ ವಯಸ್ಸು ತುಂಬಿದೆ.

(ಬಿ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, 1959 ಮತ್ತು ನಿಯಮ 1960 ರ ಗಳಲ್ಲಿ ಮತ್ತು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು, ಈ ಸಂಸ್ಥೆಯ ಉಪವಿಧಿ ಬೈಲದಲ್ಲಿ ತಿಳಿಸಿರುವಂತೆ, ಸದರಿ ಮಹಾಮಂಡಳದ ಆಡಳಿತ ಮಂಡಳಿಯ ನಿರ್ದೇಶಕನಾಗಿ ಚುನಾಯಿತನಾಗಲು ನಿರ್ಧಿಷ್ಟ ಪಡಿಸಿರುವ ಯಾವುದೇ ಅನರ್ಹತೆಗಳನ್ನು ಹೊಂದಿರುವುದಿಲ್ಲ.

(ಸಿ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮ 1960ರ ಗಳಲ್ಲಿ ಮತ್ತು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು. ಈ ಸಂಸ್ಥೆಯ ಉಪವಿಧಿ ಬೈಲಾದಲ್ಲಿ ತಿಳಿಸಿರುವಂತೆ, ಸದರಿ ಮಹಾಮಂಡಳದ ಅಡಳಿತ ಮಂಡಳಿಯ ನಿರ್ದೇಶಕನಾಗಿ ಚುನಾಯಿತನಾಗಲು ನಿರ್ಧಿಷ್ಟ ಪಡಿಸಿರುವ ಅಗತ್ಯ ಅರ್ಹತೆಗಳನ್ನು ಹೊಂದಿದ್ದೇನೆ.

(ಡಿ) ನಾನು ಆಯ್ಕೆ ಮಾಡಿರುವ ಚುನಾವಣಾ ಚಿಹ್ನೆಗಳು ಆದ್ಯತೆ ಕ್ರಮದಲ್ಲಿ ಹೀಗಿವೆ.

(1) ........................................ (2) .................................. ಮತ್ತು (3) .......................................

ಎಂದು ಈ ಮೂಲಕ ನನ್ನ ಉತ್ತಮ ತಿಳುವಳಿಕೆ ಮತ್ತು ನಂಬಿಕೆಯಿರುವಷ್ಟರ ಮಟ್ಟಿಗೆ ಘೋಷಿಸುತ್ತೇನೆ.

ಸ್ಥಳ :–

ದಿನಾಂಕ :– ಅಭ್ಯರ್ಥಿಯ ಸಹಿ

**ಸೂಚನೆ** :– 1. ಸದರಿ ಮಹಾಮಂಡಳದ ಸದಸ್ಯ ಸಂಘದ ಡೆಲಿಗೇಟ್ ಆಗಿರುವ ಸಹಕಾರ ಸಂಘದ ಡೆಲಿಗೇಟ್ ಸಂಬಂಧವಾಗಿ ಈಗಾಗಲೇ ಸಹಕಾರ ಚುನಾವಣಾ ಪ್ರಾಧಿಕಾರ ಬೆಂಗಳೂರು ರವರು ಹೊರಡಿಸಿರುವ ನಮೂನೆಯ ಪ್ರತಿಯನ್ನು ಅಭ್ಯರ್ಥಿಯು ಮತ್ತು ಈ ನಾಮಪತ್ರಕ್ಕೆ ಸೂಚಕರಾಗಿರುವ ಅವರ ನಮೂನೆಯ ಪ್ರತಿಯನ್ನು ಈ ನಾಮಪತ್ರದೊಂದಿಗೆ ಲಗತ್ತಿಸಿರಬೇಕು.

2. ಈ ನಾಮಪತ್ರದೊಂದಿಗೆ ಪ್ರತಿನಿಧಿಯಾಗಿ ಕಳುಹಿಸುವ ಸದಸ್ಯ ಸಂಘಗಳ ಆಡಳಿತಮಂಡಳಿಯ ನಿರ್ಣಯದ ದೃಢೀಕೃತ ಪ್ರತಿಯನ್ನು ಅಭ್ಯರ್ಥಿಯ ಸಂಘದಿಂದ ಮತ್ತು ಸೂಚಕರ ಸಂಘದಿಂದ ಪಡೆದು ಲಗತ್ತಿಸಿರಬೇಕು.

3. ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ರೂ. 5,000/– ನಗದು ಪಾವತಿಯಾಗಿದ್ದಲ್ಲಿ ರಸೀದಿ ಲಗತ್ತಿಸಬೇಕು / ಅಂಗೀಕೃತ ಬ್ಯಾಂಕ್ ನಿಂದ ರೂ. 5,000/– ಗಳಿಗೆ ಡಿ.ಡಿ.ಯನ್ನು ಲಗತ್ತಿಸಿರಬೇಕು.

---

## (ರಿಟರ್ನಿಂಗ್ ಆಫೀಸರ್‌ರವರಿಂದ ಭರ್ತಿಮಾಡಬೇಕಾದುದು)

ನಾಮಪತ್ರ ಕ್ರಮಸಂಖ್ಯೆ :– ............................






ಅಭ್ಯರ್ಥಿಯಾದ ಶ್ರೀ/ಶ್ರೀಮತಿ ............................................................... ರವರು ಈ ನಾಮಪತ್ರವನ್ನು ....................... ದಿನಾಂಕದಂದು ........................................... ಗಂಟೆಗೆ ನನ್ನ ಕಛೇರಿಯಲ್ಲಿ ನನಗೆ ಒಪ್ಪಿಸಿರುತ್ತಾರೆ.












ದಿನಾಂಕ :– ರಿಟರ್ನಿಂಗ್ ಆಫೀಸರ್

ಕ.ರಾ.ಸ.ಪ.ಸ.ಮಂ.ನಿ.,

ಬೆಂಗಳೂರು

# ಕೋಷ್ಟಕ 4ರ ಮುಕ್ತ ಚಿಹ್ನೆಗಳ ಚಿತ್ರಗಳ ಪಟ್ಟಿ

| | | | |
|---|---|---|---|
| <br>ಫರಾಟು<br>1) Almirah | <br>ಏರ್ ಕಂಡೀಷನರ್<br>2) Air Conditioner | <br>ಆಟೋರಿಕ್ಷಾ<br>3) Auto Rickshaw | <br>ಬಲೂನ್<br>4) Baloon |
| <br>ಹಣ್ಣುಗಳ ಬುಟ್ಟಿ<br>5) Basket Containing Fruits | <br>ಬ್ಯಾಟ್<br>6) Bat | <br>ಬ್ಯಾಟ್ಸ್ ಮನ್<br>7) Batsman | <br>ಬ್ಯಾಟರಿ ಟಾರ್ಚ್<br>8) Battery Torch |
| <br>ಬೆಲ್ಟ್<br>9) Belt | <br>ಕಪ್ಪು ಹಲಗೆ (ಬ್ಲಾಕ್ ಬೋರ್ಡ್)<br>10) Black Board | <br>(ಸೀಸ) ಬಾಟಲ್<br>11) Bottle | <br>ಬ್ರೆಡ್<br>12) Bread |
| <br>ಬ್ರೀಫ್‌ಕೇಸ್<br>13) Brief Case | 14) | <br>ಬ್ರಷ್<br>15) Brush | <br>ಬಕೇಟ್<br>16) Bucket |
| <br>ಕೇಕ್<br>17) Cake | <br>ಕ್ಯಾಲುಕಲೇಟರ್<br>18) Calculator | <br>ಕ್ಯಾಮೆರ<br>19) Camera | <br>ಮೇಣದ ಬತ್ತಿ<br>20) Candles |

| | | | |
|---|---|---|---|
| <br>ಕೇರಂ ಬೋರ್ಡ್<br>21) Carrom Board | <br>ನೆಲಹಾಸು (ಕಾರ್‌ಪೆಟ್)<br>22) Carpet | <br>ಕ್ಯಾರೆಟ್<br>23) Carrot | <br>ಹೂಕೋಸು<br>24) Cauliflower |
| <br>ಸೀಲಿಂಗ್ ಫ್ಯಾನ್<br>25) Ceiling Fan | <br>ಚೆಸ್ ಬೋರ್ಡ್<br>26) Chess Board | <br>ಕೋಟು<br>27) Coat | 28) |
| <br>ಮಂಚ<br>29) Cot | <br>ಕಿರೀಟ<br>30) Crown | <br>ಕಪ್ ಅಂಡ್ ಸಾಸರ್<br>31) Cup & Saucer | <br>ಕಟ್ಟಿಂಗ್ ಪ್ಲೇಯರ್<br>32) Cutting Player |
| <br>ಡಾವ್<br>33) Dao | <br>ಡೀಸೆಲ್ ಪಂಪ್<br>34) Diesel Pump | <br>ಡಿಶ್ ಆಂಟೇನಾ<br>35) Dish Antena | <br>ಡೋಲಿ<br>36) Dolli |
| <br>ವಿದ್ಯುತ್ ಕಂಬ<br>37) Electric Pole | <br>ಲಕೋಟೆ<br>38) Envelope | <br>ಕೊಳಲು<br>39) Flute | <br>ಲಂಗ (ಫ್ರಾಕ್)<br>40) Frock |




ಫ್ರೈಯಿಂಗ್ ಪ್ಯಾನ್
41) Frying Pan



ಫನೆಲ್
42) Funnel



ಗ್ಯಾಸ್ ಸಿಲಿಂಡರ್
43) Gas Cylinder




ಗ್ಯಾಸ್ ಸ್ಟೌವ್
44) Gas Stove



ಗಾಜಿನ ಲೋಟ
45) Glass Tumler



ದ್ರಾಕ್ಷಿ
46) Grapes




ಹಾರ್ಮೋನಿಯಂ
47) Harmonium



ಟೋಪಿ
48) Hat



ಹೆಲ್ಮೆಟ್
49) Helmet




ಹಾಕಿ ಬ್ಯಾಟ್ ಮತ್ತು ಚೆಂಡು
50) Hockey and Ball




ಐಸ್ ಕ್ರೀಮ್
51) Ice Cream



ಇಸ್ತ್ರೀ ಪೆಟ್ಟಿಗೆ
52) Iron Box



ಕೆಟಲ್
53) Kettle



ಗಾಳಿಪಟ
54) Kite



ಲೇಡಿ ಪರ್ಸ್
55) Lady Purse




ಅಂಚೆ ಪೆಟ್ಟಿಗೆ
56) Letter Box



ಮಿಕ್ಷಿ
57) Mixee














ನೈಲ್ ಕಟ್ಟರ್
58) Nail Cutter







ನೆಕ್ ಟೈ
59) Neck Tie



ಪೆನ್ ಸ್ಟ್ಯಾಂಡ್
60) Pen Stand

| | | | |
|---|---|---|---|
|  ಪೆನ್ಸಿಲ್ ಶಾರ್ಪನರ್ 61) Pencil Sharpner |  ಪ್ಲಾಟ್ ಸ್ಟ್ಯಾಂಡ್ 62) Plate Stand |  ಕುಡಿಕೆ 63) Pot |  ಪ್ರಷರ್ ಕುಕ್ಕರ್ 64) Pressure Cooker |
|  ರೇಝುರ್ 65) Razor |  ರೆಫ್ರಿಜರೇಟರ್ 66) Refrigerator |  ಉಂಗುರ 67) Ring |  ಗರಗಸ 68) Saw |
|  ಸ್ಕೂಲ್ ಬ್ಯಾಗ್ 69) School Bag |  ಕತ್ತರಿ 70) Scissor |  ಹೊಲಿಗೆ ಯಂತ್ರ 71) Sewing Machine |  ಶಟಲ್ 72) Shuttle |
|  ಸ್ಲೇಟ್ 73) Slate |  ಸ್ಟೆತೋಸ್ಕೋಪ್ 74) Stethoscope |  ಸ್ಟೂಲ್ 75) Stool |  ಟೇಬಲ್ 76) Table |
|  ಟೇಬಲ್ ಲ್ಯಾಂಪ್ 77) Table Lamb |  ಟೆಲಿಫೋನ್ 78) Telephone |  ಟೆಲಿವಿಷನ್ 79) Television |  ಟೆಂಟ್ 80) Tent |

| | | | |
|---|---|---|---|
| <br>ಟೂಥ್ ಬ್ರಷ್<br>81) Tooth Brush | <br>ತುತ್ತೂರಿ<br>82) Trumpet | <br>ಪಿಟೀಲು (ವಯೋಲಿನ್)<br>83) Violin | <br>ವಾಕಿಂಗ್ ಸ್ಟಿಕ್<br>84) Walking Stick |
| <br>ಕೊಳಾಯಿ<br>85) Water Tap | <br>ಸೀಟಿ<br>86) Whistle | <br>ಕಿಟಕಿ<br>87) Window | |

**ತೆರೆದ ಅಂಚೆ**

# ಮುದ್ರಿತ ಪುಸ್ತಕ

ಗೆ,

-----------------------------------

-----------------------------------

-----------------------------------

-----------------------------------

ಇಂದ,
**ಡಾ॥ ಬಿ.ಆರ್. ಹರೀಶ್, ಕೆ.ಎ.ಎಸ್.**
ವಿಶೇಷ ಭೂಸ್ವಾಧೀನಾಧಿಕಾರಿ–3
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ರಿಟರ್ನಿಂಗ್ ಆಫೀಸರ್,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ,
ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆ.ಬಿ. ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಬಡಾವಣೆ, ಬೆಂಗಳೂರು – 560096.